ನೋಡಿ ಮುಸಿ ಮುಸಿ ನಗುತ್ತಾರೆ. ಅಥವಾ ಆ ಜನರು ನೋಡುವ ದೃಷ್ಟಿಯೇ ಬೇರೆ. ಇರಲಿ, ಅದು ಅವರವರ ಭಾವಕ್ಕೆ ಬಿಟ್ಟಿರುವುದು. ಹಾಗಾಗಿ ಕೆಂಪು ದೀಪ ಹಾಕಿಕೊಳ್ಳುವುದರ ಬಗ್ಗೆ ಯಾರ್ಯಾರನ್ನು ಕಾರ್ಯಕ್ರಮಕ್ಕೆ ಕರೆಯಬೇಕೆನ್ನುವುದರ ಬಗ್ಗೆ cabinet status ಬಗ್ಗೆ ನಿರ್ದಿಷ್ಟವಾದ ನಿರ್ದೇಶನವನ್ನು Chief Secretary ಯವರಿಗೆ ಕೊಡುತ್ತೇವೆ.

ಅಧ್ಯಕ್ಷರು : ಆಯಿತು. ಸರ್ಕಾರದಿಂದ ಉತ್ತರ ಬಂದಿದೆ. ಅಶೋಕ್‌ರವರೆ ಕುಳಿತುಕೊಳ್ಳಿ.

ಶ್ರೀ ಪಿ.ಎಂ. ಅಶೋಕ್ : ಆಹ್ವಾನ ಪತ್ರಿಕೆಯಲ್ಲಿ ಅಧ್ಯಕ್ಷತೆ first ಇರಬೇಕೋ, ಮುಖ್ಯ ಅತಿಥಿ ಹೆಸರು first ಇರಬೇಕೋ ಎನ್ನುವ ಬಗ್ಗೆ clarification ಕೊಡಬೇಕೆಂದು ಕಾನೂನು ಮಂತ್ರಿಯವರನ್ನು ಕೇಳಬಯಸುತ್ತೇನೆ.

6. ಅಧ್ಯಕ್ಷರ ತೀರ್ಪು :

ಶಿಷ್ಟಾಚಾರ ಉಲ್ಲಂಘನೆ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆಯುವ ಬಗ್ಗೆ.

ಅಧ್ಯಕ್ಷರು : ಮಾನ್ಯ ಸದಸ್ಯರುಗಳಾದ ಪಿ.ಎಂ.ಅಶೋಕ್‌ರವರು, ಎನ್. ಸಂಪಂಗಿಯವರು, ಶಿವಶಂಕರರೆಡ್ಡಿಯವರು ಮಾತನಾಡಿ ಸರ್ಕಾರಿ ಕಾರ್ಯಕ್ರಮಗಳಲ್ಲಿ ಶಿಷ್ಟಾಚಾರದ ಪಾಲನೆಯಾಗದೆ ಎಲ್ಲವೂ ಉಲ್ಲಂಘನೆಯಾಗುತ್ತಿದೆ ಎನ್ನುವುದನ್ನು ಸದನದ ಗಮನಕ್ಕೆ ತಂದಿದ್ದಾರೆ ಮತ್ತು ಸರ್ಕಾರದಿಂದ ಇದಕ್ಕೆ ಉತ್ತರವನ್ನೂ ಸಹ ಕೊಟ್ಟಿದ್ದಾರೆ. ಇದರಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗುವಂಥದ್ದನ್ನು ಬಹಳ ಸ್ಪಷ್ಟವಾಗಿ ಅನೇಕ ಸದಸ್ಯರು ಕೂಡ ಹೇಳಿದ್ದಾರೆ. ಇನ್ನು ಮುಂದೆಯಾದರೂ ಸ್ಪಷ್ಟವಾದ ಸೂಚನೆಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಅದರಲ್ಲೂ ವಿಶೇಷವಾಗಿ ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಎಲ್ಲಾ ಅಧಿಕಾರಿಗಳಿಗೆ ಇದರ ಸೂಚನೆಯನ್ನು ಕೊಡಬೇಕು. ಇದರ ಬಗ್ಗೆ ಈಗೇನು ಮಾಹಿತಿ ಕೊಟ್ಟಿದ್ದಾರೆ ಮತ್ತು ಯಾರು ಅಧಿಕಾರಿಗಳು ಶಿಷ್ಟಾಚಾರ ಉಲ್ಲಂಘನೆ ಮಾಡಿದ್ದಾರೆ ಆ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರವನ್ನು ಬರೆಯಬೇಕು. ಒಂದೆರಡರಲ್ಲಿಯಾದರೂ punishment ಆಗಲೇಬೇಕು.

ಡಾ: ಹೆಚ್.ಸಿ. ಮಹದೇವಪ್ಪ : ಯಾರ್ಯಾರು red light ಉಪಯೋಗಿಸಬಹುದು ಅದನ್ನು ಕೂಡ ಸೇರಿಸಬೇಕು.

ಅಧ್ಯಕ್ಷರು : ಯಾರ್ಯಾರು ಕೆಂಪು ದೀಪ ಉಪಯೋಗಿಸಬಹುದು ಅದನ್ನು ಸಹ ಶಿಷ್ಟಾಚಾರದ ಅಡಿಯಲ್ಲಿ ಯಾರ್ಯಾರಿಗೆ ಈ red light ಉಪಯೋಗಿಸುವುದಕ್ಕೆ ಅವಕಾಶವಿದೆ ಎಂಬುದನ್ನೂ ಸೇರಿಸಬೇಕೆಂದು ಹೇಳಿ ಸದ್ಯಕ್ಕೆ ಹಕ್ಕುಚ್ಯುತಿಯಿಂದ ಇದನ್ನು ಕೈಬಿಟ್ಟಿದ್ದೇನೆ.

ಶ್ರೀ ಎನ್. ಸಂಪಂಗಿ : Red light ಒಂದೇ ಅಲ್ಲ, ಕೇಸರಿ ಲೈಟ್, green light ಈ ತರಹದ್ದು ಸಹ ಬರುತ್ತಿದೆ.

7. ಅಧ್ಯಕ್ಷರ ಅಪ್ಪಣೆ ಮೇರೆಗೆ (ಮುಂದು):

ಅ) ವಿಷಯ: ಬೆಂಗಳೂರು ನಗರದಲ್ಲಿ ಕುಡಿಯುವ ನೀರಿಗಾಗಿ ಹಾಹಾಕಾರ ಜಾಸ್ತಿಯಾಗಿರುವ ಬಗ್ಗೆ.

ಶ್ರೀ ನೆ.ಲ. ನರೇಂದ್ರ ಬಾಬು (ಮಹಾಲಕ್ಷ್ಮಿಪುರಂ) : ಮಾನ್ಯ ಅಧ್ಯಕ್ಷರೆ, ನಾನು ಇಂದು ಬೆಳಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ಅವಕಾಶ ಕೊಡಬೇಕೆಂದು ಕೇಳಿದ್ದೆ. ಇದೇ ವಿಷಯಕ್ಕೆ ಸಂಬಂಧಿಸಿದಂತೆ ಇಂದು ಬೆಳಿಗ್ಗೆ ಸಭೆ ಕರೆದಿದ್ದರು. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಹಾಹಾಕಾರ ಜಾಸ್ತಿಯಾಗಿರುವ ಹಿನ್ನೆಲೆಯಲ್ಲಿ ನಾನು ಮಾನ್ಯ ಜಲಮಂಡಳಿ ಸಚಿವರಿಗೆ ವಿನಂತಿ ಮಾಡುತ್ತೇನೆ. ಬಹುತೇಕ ನಮ್ಮ ತಿಪ್ಪಗೊಂಡನಹಳ್ಳಿಯ ಭಾಗದಲ್ಲಿ ನೀರು ಸರಬರಾಜು ಏನಾಗುತ್ತಿತ್ತು, ಆ ಪ್ರದೇಶಗಳಿಗೆ ಈಗ ಬಹಳ ತೊಂದರೆಯಾಗಿದೆ. ಹೊಸ ಪ್ರದೇಶಗಳು ಸೇರ್ಪಡೆಯಾದಮೇಲೆ ಹಳೆಯ ಪ್ರದೇಶಗಳು ಕಡೆಗಣಿಸಲ್ಪಟ್ಟಿವೆ ಮತ್ತು ಕೊಳವೆ ಬಾವಿಗಳು ಸಮಯಕ್ಕೆ ಸರಿಯಾಗಿ ದುರಸ್ತಿಯಾಗುತ್ತಿಲ್ಲ. ಇದಕ್ಕೆ ಕಾರಣ ಕೇಳಿದಾಗಲೆಲ್ಲ ಜಲಮಂಡಳಿಯವರು ವಿದ್ಯುಚ್ಛಕ್ತಿ ಇಲಾಖೆಯ ಮೇಲೆ ಹೇಳುತ್ತಾರೆ. ವಿದ್ಯುಚ್ಛಕ್ತಿ ಮತ್ತು ಜಲಮಂಡಳಿಯವರು ಜೊತೆ ಜೊತೆಯಾಗಿ ಸಂಯೋಜನೆ ಇಲ್ಲದೆ ಬೆಂಗಳೂರು ನಗರದಲ್ಲಿ ಇರತಕ್ಕಂಥ ನೀರು ಸಹ ಸಮರ್ಪಕವಾಗಿ ವಿತರಣೆಯಾಗುತ್ತಿಲ್ಲ. ಪ್ರತಿನಿತ್ಯ ಬೆಂಗಳೂರಿನ ಶಾಸಕರು ತಮ್ಮ ತಮ್ಮ ಕ್ಷೇತ್ರ ಪರ್ಯಟನೆಗೆ ಹೋದಾಗ ಈ ಆಪಾದನೆಗೆ, ಪರೀಕ್ಷೆಗೆ ಮತ್ತು ಜನರ ಸಿಟ್ಟಿಗೆ ಗುರಿಯಾಗುತ್ತಿದ್ದಾರೆ. ಅದಕ್ಕೆ ದೂರದೃಷ್ಟಿಯ ಕಾರ್ಯಕ್ರಮಗಳೇನು? Short